# ರಂಗುರಂಗಿನ ಮ್ಯಾಟಿಗೆ ಸಥರಂಗಿ



ಹಿಂದೆ ಜನರು ಕೈ ಮಗ್ಗದಿಂದಲೆ ಬಟ್ಟೆಗಳನ್ನು ತಯಾರಿಸುತ್ತಿದ್ದರು. ಕಾಲ ಕಳೆದ ಹಾಗೇ ಅವು ಮೂಲೆಗುಂಪಾಗಿವೆ. ಈಗ ಏನಿದ್ದರೂ ವಿದ್ಯುತ್ ಮಗ್ಗಗಳ ಬಳಕೆ ಹೆಚ್ಚು. ಭಾರತದ ಕೆಲವೇ ಕೆಲವು ರಾಜ್ಯಗಳಲ್ಲಿ ಈ ಕೈಮಗ್ಗದ ಕೆಲಸ ನೋಡಬಹುದು. ಇದಕ್ಕೆ ಸಥರಂಗಿ ಅಥವಾ ಧರಿ ಹೆಸರಿಂದ ಕೂಡ ಕರೆಯುತ್ತಾರೆ.

ಮನೆಯಲ್ಲಿರುವ ಚಿಂದಿ ಬಟ್ಟೆ ಅಥವಾ ಹರಿದು ಹೋಗಿರುವಂತಹ ಬಟ್ಟೆಯಿಂದ ಮ್ಯಾಟು ಅಥವಾ ಚದ್ದರ್ ಮಾಡುವ ಸಲುವಾಗಿಯೆ ಈ ಕೈಮಗ್ಗದ ಬಳಕೆ ಇದೆ. ಇದಕ್ಕೆ ದಾರದ ಉಂಡೆಯನ್ನು ಬಳಕೆ ಮಾಡುತ್ತಾರೆ. (ಚಿತ್ರದಲ್ಲಿ ಕಾಣುವ) ಇದನ್ನ ಚಲಾಯಿಸುವುದು ತುಂಬಾ ಸುಲಭ. ಸ್ವಲ್ಪ ಕಾಲಿಗೆ ಕಸರತ್ತು ನೀಡಬೇಕು.

ಪುಣೆಯ ದೇವುಗಾವ್‌ನಲ್ಲಿರುವ ಮೊಹ್ಮದ್ ಉತ್ತರ ಪ್ರದೇಶದ ಕಾನ್ಪುರದವರು. ಚಿಂದಿಬಟ್ಟೆಯಿಂದ ಚಂದನೆಯ ಮ್ಯಾಟು ಅಥವಾ ಚದ್ದರ್ ತಯಾರಿಸಿ ಕೊಡುತ್ತಾರೆ. ಈ ಸಥರಂಗಿ ತಯಾರಿಸಲು ಸುಮಾರು 6,500 ರಿಂದ 8 ಸಾವಿರದವರೆಗೆ ಖರ್ಚು ಬರುತ್ತದೆ. ಕೇವಲ ಹತ್ತಿ ಬಟ್ಟೆಯನ್ನೇ ಬಳಕೆ ಮಾಡಬೇಕು. ದಾರದ ಹಿಡಿತ ಹಾಗೂ ನೇಯಲು ತುಂಬಾ ಸುಲಭವಾಗುತ್ತದೆ ಅನ್ನುತ್ತಾರೆ ಮೊಹ್ಮದ್.

ಚಿತ್ರ-ಬರಹ: **ಆದರ್ಶ ಪೈ, ಶಿರಸಿ**



# ಏನಿವು ಕಟ್ಟೆಗಳು?

ಬೆಂಗಳೂರಿನ ಬಸವನಗುಡಿ ವಾಡಿಯಾ ರಸ್ತೆಯಲ್ಲಿರುವ 'ದಿ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್'ನ ಆವರಣದಲ್ಲಿರುವ ಇವು ಏನು ಗೊತ್ತೆ? 'ಸ್ಟ್ಯಾಂಡ್' ರಹಿತ ಬೈಸಿಕಲ್ ನಿಲ್ಲಿಸಲು ರೂಪಿಸಲಾಗಿರುವ ಕಟ್ಟೆಗಳು. ಬೈಸಿಕಲ್ಲಿನ ಮುಂದಿನ ಚಕ್ರವನ್ನು ಕಟ್ಟೆಯ ಮೇಲಿನ ಓಣಿಗೆ ತಂದರಾಯಿತು. ಬೈಸಿಕಲ್ ಬಿಲ್‌ಕುಲ್ ಬೀಳದೆ ನಿಲ್ಲುತ್ತದೆ. ಈಗ ಬೈಸಿಕಲ್ ಬಳಕೆ ಬಹುತೇಕ ಇಲ್ಲವೇ ಇಲ್ಲವಲ್ಲ. ಹಾಗಾಗಿ ಈ ಕಟ್ಟೆಗಳು ಪಳೆಯುಳಿಕೆಗಳಂತೆ ತೋರಿದರೆ ಅಚ್ಚರಿಯಿಲ್ಲ. 'ಪರಿಸರ ಸ್ನೇಹಿಯೇ, ನಿನಗಾಗಿ ಕಾಯುತ್ತಿರುವೆ ಬಾ' ಎಂದು ಪ್ರಲಾಪಿಸುತ್ತಿರುವುವೆ ಇವು?

ಚಿತ್ರ-ಬರಹ: **ಬಿಂಡಿಗನವಿಲೆ ಭಗವಾನ್, ಬೆಂಗಳೂರು**

# ಬೆಂಕಿ ಕಡ್ಡಿಯಲ್ಲಿ ಗಣಪ

ಗಣಪತಿ ನಿಜ ಅರ್ಥದಲ್ಲಿ ಮಣ್ಣಿನ ಮಗ. ಆದರೆ ಬೆಂಕಿ ಕಡ್ಡಿಯಲ್ಲಿ ಮೂಡಿಬಂದ ಗಣಪ ನಮ್ಮೆಲ್ಲರ ಗಮನ ಸೆಳೆದು ಮೋಡಿ ಮಾಡುತ್ತಿದ್ದಾನೆ ನೋಡಿ ಇಲ್ಲಿ.

ಚಿತ್ರದಲ್ಲಿ ವೀಣಾಧಾರಿ ಗಣೇಶ, ನೃತ್ಯ ಭಂಗಿಯ ಗಣೇಶ, ಮೃದಂಗವಾದನ ಗಣೇಶ ಹೀಗೆ ಹಾವ ಭಾವಗಳಿಂದ ನೋಡುಗರಿಗೆ ಮುದ ನೀಡುತ್ತದೆ. ಪುತ್ತೂರಿನ ಕಲಾವಿದ ಪ್ರವೀಣ್ ವರ್ಣಕುಟೀರ ಈ ತಂತ್ರದಲ್ಲಿ ಪರಿಣಿತರು. ಪುತ್ತೂರು ಅಕ್ಯೂಪ್ರೆಶರ್ ಮಾಹಿತಿ ಹಾಗೂ ವರ್ಣಕುಟೀರ ಚಿತ್ರ ಕಲಾ ತರಬೇತಿ ಕೇಂದ್ರದ ನಿರ್ದೇಶಕರಾದ ಇವರು ಬೆಥನಿ ಆಂಗ್ಲಮಾಧ್ಯಮ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಚಿತ್ರಕಲಾ ತರಬೇತಿ ನೀಡುತ್ತಿದ್ದಾರೆ. ಬೆಂಕಿ ಕಡ್ಡಿಯಲ್ಲಿ ಗಣೇಶನನ್ನು ಮಾಡುವಾಗ ಒಂದು ಸ್ವಲ್ಪ ತಾಳ್ಮೆಯನ್ನು ಕಳೆದುಕೊಂಡರೂ ಅದು ತನ್ನ ರೂಪವನ್ನು ಕಳೆದುಕೊಳ್ಳುತ್ತದೆ.

ಚಿತ್ರ-ಬರಹ: **ಕುಮಾರ್ ಪೆರ್ನಾಜೆ, ಪುತ್ತೂರು**

